**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12***

ಸಂಖ್ಯೆ:ಪಪೂಶಿಇ/ ಶೈ, ಶಾ-04/ಹೆ.ಮ.ಶು.ವಿ/2012-13 ದಿನಾಂಕ:21.12.2012

**ತಿದ್ದುಪಡಿ ಜ್ಞಾಪನ**

ವಿಷಯ: 2012-13ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿತ್ತಿರುವ ಹೆಣ್ಣು ಮಕ್ಕಳ ಶುಲ್ಕ ವಿನಾಯ್ತಿ (ಎಸ್ ಸಿ/ಎಸ್.ಟಿ/ಗ್ರೂಪ್-01ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ)ಯೋಜನೆಯಡಿ ನೀಡಲಾದ ಶುಲ್ಕ ವಿನಾಯಿತಿಯಿಂದ ಅರೆ ಸರ್ಕಾರೇತರ ಶುಲ್ಕಗಳನ್ನು ಸದರಿ ಅನುದಾನದಿಂದ ಸಂಬಂಧಿಸಿದ ಕಾಲೇಜುಗಳಿಗೆ ಮರುಪಾವತಿ ಮಾಡುವ ಬಗ್ಗೆ.

ಉಲ್ಲೇಖ; 1. ಸರ್ಕಾರದ ಆದೇಶ ಸಂಖ್ಯೆ ಇಡಿ 89 ಯೋಯೋಕ 2012, ಬೆಂಗಳೂರು ದಿನಾಂಕ: 07.11.2012 , [ಇಡಿ :31:ಸ್ವೀಮರ (ಯುನಿಕ್) 2009, ದಿನಾಂಕ: 07.11.2012].

2. ಸರ್ಕಾರದ ಕಾರ್ಯದರ್ಶಿ ರವರ ತಿದ್ದುಪಡಿಆದೇಶ ಸಂಖ್ಯೆ:ಇಡಿ 89 ಯೋಯೋಕ 2012, ದಿನಾಂಕ: 18.12.2012.

*********

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಸರ್ಕಾರೇತರ ಶುಲ್ಕ ವಿನಾಯಿತಿ ಕಲ್ಪಿಸಬೇಕಾಗಿರುತ್ತದೆ. ಅದ್ದರಿಂದ ಕಾಲೇಜುಗಳ ಸರ್ಕಾರೇತರ ಶುಲ್ಕಗಳನ್ನು ಸದರಿ ವಿದ್ಯಾರ್ಥಿಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ.

2012-13 ನೇ ಶೈಕ್ಷಣಿಕ ವರ್ಷಕ್ಕೆ ಈ ಕೆಳಕಂಡ ಸರ್ಕಾರೇತರ ಶುಲ್ಕಗಳನ್ನು ಬಿಡುಗಡೆ ಮಾಡಬೇಕಿರುತ್ತದೆ.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಕ್ರೀಡಾ ಶುಲ್ಕ | 70-00 | 70-00 |
| 2 | ವಾಚನಾಲಯ ಶುಲ್ಕ | 100-00 | 100-00 |
| 3 | ಶಿಕ್ಷಕರ ಕಲ್ಯಾಣ ನಿಧಿ | 21-00 | 21-00 |
| 4 | ವಿದ್ಯಾರ್ಥಿ ಕಲ್ಯಾಣ ನಿಧಿ | 21-00 | 21-00 |
| 5 | ಪರೀಕ್ಷಾ ಶುಲ್ಕ (ಕಾಲೇಜಿನ ಹಂತದಲ್ಲಿ ನಡೆಸುತ್ತಿರುವ ) | 140-00 | 140-00 |
| 6 | ವಿಶೇಷ ಕ್ರೀಡಾ ಶುಲ್ಕ | 28-00 | 28-00 |
| | | 380-00 | 380-00 |

ಸರ್ಕಾರವು 2012-13ನೇ ಶೈಕ್ಷಣಿಕ ವರ್ಷಕ್ಕೆ ರೂ 300-00 ಲಕ್ಷಗಳನ್ನು ಈ ಉದ್ದೇಶಕ್ಕಾಗಿ ಉಲ್ಲೇಖಿತ ಆದೇಶದ ಪ್ರಕಾರ ಮಂಜೂರು ಮಾಡಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ 89ಯೋಯೋಕ 2012, ಬೆಂಗಳೂರು ದಿನಾಂಕ:07.11.2012,[ಇಡಿ:31: ಸ್ಪೀಮರ (ಯುನಿಕ್) 2012, ದಿನಾಂಕ:07.11.2012]. ಒಂದನೇಯ, ಎರಡನೇಯ ಮತ್ತು ಮೂರನೇ ತ್ರೈಮಾಸಿಕ ಕಂತಿನಲ್ಲಿ ರೂ 225 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ. ಈ ಕಂತಿನ ಅನುದಾನವನ್ನು ನವೆಂಬರ್ ತಿಂಗಳೊಳಗೆ ಖರ್ಚು ಮಾಡಬೇಕೆಂದು ತಿಳಿಸಿರುತ್ತಾರೆ, ಒಂದು ವೇಳೆ ನವೆಂಬರ್ ತಿಂಗಳಿನೊಳಗೆ ಮೂರನೇ ಕಂತಿನ ಅನುದಾನವನ್ನು ಬಳಸಿಕೊಳ್ಳದಿದ್ದರೆ ಮುಂದಿನ ಕಂತಿನ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ. 2011-12 ನೇ ವರ್ಷದಲ್ಲಿ ಅಭ್ಯಾಸಮಾಡಿದ ವಿದ್ಯಾರ್ಥಿಗಳ ಪೈಕಿ ಶೇಕಡ 45% ರಂತೆ 59210 ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) . ಸಂಖ್ಯೆಗನುಗುಣವಾಗಿ ಮೊದಲ ಕಂತಿನಲ್ಲಿ ಒಟ್ಟಾರೆಯಾಗಿ ಪ್ರತಿ ವಿದ್ಯಾರ್ಥಿನಿಗೆ ರೂ380/ರಂತೆ ಬಿಡುಗಡೆ ಮಾಡಿದೆ.

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಶಿಕ್ಷಕರ ಕಲ್ಯಾಣ ನಿಧಿ (TBF) | 21-00 | 21-00 |
| 2 | ವಿದ್ಯಾರ್ಥಿ ಕಲ್ಯಾಣ ನಿಧಿ(SWF) | 8-00 | 8-00 |
| 3 | ವಿಶೇಷ ಕ್ರೀಡಾ ಶುಲ್ಕ (SSF) | 28-00 | 28-00 |
| | ಒಟ್ಟು | 57-00 | 57-00 |

***ಮೇಲಿನ ಈ ಅನುದಾನವನ್ನು ಕಾಲೇಜಿನ ಪ್ರಾಂಶುಪಾಲರುಗಳು ನೇರವಾಗಿ ಸಂಬಂಧಿಸಿದವರಿಗೆ ಪಾವತಿಸಲು ಈ ಮೂಲಕ ಸೂಚಿಸಲಾಗಿದೆ.*** ಪ್ರತಿ ವಿದ್ಯಾರ್ಥಿನಿಗೆ 2011-12 ನೇ ವರ್ಷದಲ್ಲಿ ಅಭ್ಯಾಸಮಾಡಿದ ವಿದ್ಯಾರ್ಥಿನಿಯರ ಪೈಕಿ ಶೇಕಡ 45% ರ ಸಂಖ್ಯೆಗನುಗುಣವಾಗಿ ರೂ380/ರಂತೆ ಬಿಡುಗಡೆ ಮಾಡಬೇಕಾದ ಬಾಬ್ತು ಮೊತ್ತವನ್ನು ಅನುಬಂಧ 01 ರಲ್ಲಿ ತೋರಿಸಲಾಗಿ ಅಯಾಯ ಜಿಲ್ಲಾ ಉಪನಿರ್ದೇಶಕರಿಗೆ ಅನುದಾನವನ್ನು ಬಿಡುಗಡೆ ಮಾಡಿದೆ.

ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾದ ಮೊತ್ತವನ್ನು, ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-01 ರಲ್ಲಿ ತೋರಿಸಲಾಗಿದೆ. ಉಪನಿರ್ದೇಶಕರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿಯಲ್ಲಿ ಅಭ್ಯಾಸ ಮಾಡುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರುತುಪಡಿಸಿ), ವಿವರಗಳನ್ನು ಪ್ರಾಚಾರ್ಯರಿಂದ ಪಡೆದು ದಿನಾಂಕ 29.12.2012 ರೊಳಗೆ ಅನುದಾನ ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಈ ಅನುದಾನವನ್ನು 2011-12 ನೇ ವರ್ಷದಲ್ಲಿ ಅಭ್ಯಾಸ ಮಾಡಿದ ಸಾಮನ್ಯ ವರ್ಗದ ವಿದ್ಯಾರ್ಥಿನಿಯರ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರೆನ್ನು ಹೊರುತುಪಡಿಸಿ) ಸಂಖ್ಯೆಯ ಆದಾರದ ಮೇಲೆ ಪ್ರತಿ ವಿದ್ಯಾರ್ಥಿನಿಗೆ ರೂ 380-00 ರಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸದರಿ ಅನುದಾನವನ್ನು ಲೆಕ್ಕ ಶೀರ್ಷಿಕೆ 2202-02-800-1-05-106 (ಯೋಜನೆ) ಅಡಿಯಲ್ಲಿ ಬಿಡುಗಡೆ ಮಾಡಲಾಗಿದ್ದು, ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನವನ್ನು ಆಯಾ ಜಿಲ್ಲಾ ಉಪನಿರ್ದೇಶಕರು ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಬಿಡುಗಡೆ ಮಾಡಿ ಈ ಮೊತ್ತವನ್ನು ಡಿ.ಸಿ.ಬಿಲ್ಲಿನ ಕೆ.ಎಫ್.ಸಿ. ನಮೂನೆ-5 ರಲ್ಲಿ ಮುಖಾಂತರ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪದವಿ ಪೂರ್ವ

ಕಾಲೇಜುಗಳ ಪ್ರಾಂಶುಪಾಲರಗಳು ಕಡ್ಡಾಯವಾಗಿ ಡ್ರಾ ಮಾಡಿಕೊಳ್ಳಲು ಸೂಚನೆ ನೀಡುವುದು. ಹಾಗೂ ಪ್ರಾಚಾರ್ಯರುಗಳಿಗೆ ಈ ಕೆಳಕಂಡ ಷರುತ್ತುಗಳನ್ನು ಪಾಲಿಸಲು ಸೂಚಿಸಲಾಗಿದೆ.

1. ಸಾಮಾನ್ಯ ವಿದ್ಯಾರ್ಥಿನಿಯರಿಂದ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರುತುಪಡಿಸಿ) ಸರ್ಕಾರೇತರ ಯಾವುದೇ ಶುಲ್ಕಗಳನ್ನು ವಸೂಲಿ ಮಾಡಿಲ್ಲವೆಂದು ಪ್ರಾಂಶುಪಾಲರ ದೃಢೀಕರಣ ಪತ್ರ ಪಡೆದು ಬಿಲ್ಲನ್ನು ಮೇಲು ಸಹಿ ಮಾಡುವುದು.
2. ಈ ಬಗ್ಗೆ ವೆಚ್ಚವನ್ನು ನಿಯಮಾನುಸಾರ ಭರಿಸಿ ಲೆಕ್ಕ ಪತ್ರವನ್ನು ನಿರ್ವಹಿಸಲಾಗುವುದು ಎಂಬ ದೃಢೀಕರಣವನ್ನು ಪ್ರಾಂಶುಪಾಲರಿಂದ ಪಡೆಯತಕ್ಕದ್ದು.

ಜಿಲ್ಲಾ ಉಪನಿರ್ದೇಶಕರು ಈ ಆದೇಶದನ್ವಯ ಬಿಡುಗಡೆಮಾಡಲಾದ ಅನುದಾನವನ್ನು ದಿನಾಂಕ **02.01.2013 ರೊಳಗಾಗಿ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಖಜಾನೆಯಿಂದ ಡ್ರಾ ಮಾಡಿಕೊಳ್ಳುವಂತೆ ಸೂಚಿಸುವುದು. ಯಾವುದೇ ಕಾರಣಕ್ಕೂ ಈ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಲ್ಯಾಪ್ಸ್ ಆಗದಂತೆ ಮೇಲ್ಕಂಡ ದಿನಾಂಕದೊಳಗೆ ಡ್ರಾ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು. ಬಳಕೆಯಾಗದ ಉಳಿದ ಅನುದಾನದ ವಿವರವನ್ನು ಬಳಕೆ ಪ್ರಮಾಣ ಪತ್ರದೊಂದಿಗೆ** ದಿನಾಂಕ **05.01.2013** ರೊಳಗಾಗಿ ಜಂಟಿ ನಿರ್ದೇಶಕರು (ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012 ಇವರಿಗೆ ಕಳುಹಿಸಲು ಸೂಚಿಸಿದೆ.

ಜಿಲ್ಲಾ ಉಪನಿರ್ದೇಶಕರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ (ಸಾಮನ್ಯ/ಎಸ್ ಸಿ/ಎಸ್.ಟಿ/ಗ್ರೂಪ್-01 ರ ಹೊರುತುಪಡಿಸಿ) ವಿವರಗಳನ್ನು ಈ ಕಛೇರಿಗೆ ತುರ್ತಾಗಿ 'ಜಂಟಿ ನಿರ್ದೇಶಕರು (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012' ಇವರಿಗೆ ಕಳುಹಿಸಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:1

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿದ ಖಜಾನಾಧಿಕಾರಿಗಳು.
4. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
6. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

ಹೆಣ್ಣು ಮಕ್ಕಳ ಶುಲ್ಕ ವಿನಾಯ್ತಿ ಯೋಜನೆಯಡಿ 2011-12 ನೇ ಶೈಕ್ಷಣಿಕ ವರ್ಷಕ್ಕೆ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ (ಎಸ್ ಸಿ/ಎಸ್.ಟಿ/ಗ್ರೂಪ್-01 ರ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ) ಸರ್ಕಾರೇತರ ಶುಲ್ಕ ವಿನಾಯಿತಿಯ ಮೊತ್ತವನ್ನು ಕಾಲೇಜಿಗೆ ಪಾವತಿಸುವ ಬಗ್ಗೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಮೊದಲ ಕಂತಿನಲ್ಲಿ ಬಿಡುಗಡೆ ಮಾಡಲಾದ ಮೊತ್ತವನ್ನು ತೋರಿಸುವ ಪಟ್ಟಿ (2011-12 ನೇ ಸಾಲಿನ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರಿಗೆ ಸಂಖ್ಯೆಗಳಲ್ಲಿ ಶೇಕಡ 45 ರಂತೆ ಬಿಡುಗಡೆ ಮಾಡಲಾಗಿದೆ.

| sl no | District Name | Total no of students | | Total amount | Amount for students |
|---|---|---|---|---|---|
| 1 | ಬೆಂಗಳೂರು-ಉತ್ತರ | 3153 | 1500 | 380 | 570000 |
| 2 | ಬೆಂಗಳೂರು-ದಕ್ಷಿಣ | 2769 | 1300 | 380 | 494000 |
| 3 | ಬೆಂಗಳೂರು-ಗ್ರಾಮಾಂತರ | 2638 | 1187 | 380 | 451060 |
| 4 | ರಾಮನಗರ | 3003 | 1351 | 380 | 513380 |
| 5 | ಬಳ್ಳಾರಿ | 3059 | 1377 | 380 | 523260 |
| 6 | ಬೆಳಗಾವಿ | 5361 | 2412 | 380 | 916560 |
| 7 | ಬಾಗಲಕೋಟ | 4508 | 2029 | 380 | 771020 |
| 8 | ವಿಜಾಪುರ | 2208 | 994 | 380 | 377720 |
| 9 | ಬೀದರ | 1451 | 653 | 380 | 248140 |
| 10 | ದಾವಣಗೆರೆ | 3912 | 1760 | 380 | 668800 |
| 11 | ಚಿತ್ರದುರ್ಗ | 3494 | 1572 | 380 | 597360 |
| 12 | ಚಿಕ್ಕಮಂಗಳೂರು | 5287 | 2450 | 380 | 931000 |
| 13 | ಗದಗ | 1506 | 678 | 380 | 257640 |
| 14 | ಹಾವೇರಿ | 2060 | 927 | 380 | 352260 |
| 15 | ಧಾರವಾಡ | 1597 | 719 | 380 | 273220 |
| 16 | ಗುಲ್ಬರ್ಗಾ | 8099 | 3645 | 380 | 1385100 |
| 17 | ಯಾದಗಿರಿ | 2173 | 978 | 380 | 371640 |
| 18 | ಹಾಸನ | 8316 | 3742 | 380 | 1421960 |
| 19 | ಚಿಕ್ಕಬಳ್ಳಾಪುರ | 3695 | 1663 | 380 | 631940 |
| 20 | ಕೋಲಾರ | 4931 | 2219 | 380 | 843220 |
| 21 | ಚಾಮರಾಜನಗರ. | 1343 | 604 | 380 | 229520 |
| 22 | ಮಂಡ್ಯ | 7316 | 3350 | 380 | 1273000 |
| 23 | ಮೈಸೂರು | 8213 | 3696 | 380 | 1404480 |
| 24 | ಉತ್ತರ ಕನ್ನಡ | 5668 | 2551 | 380 | 969380 |
| 25 | ಕೊಪ್ಪಳ | 2838 | 1277 | 380 | 485260 |
| 26 | ರಾಯಚೂರು | 1980 | 891 | 380 | 338580 |
| 27 | ಉಡುಪಿ | 4850 | 2214 | 380 | 841320 |
| 28 | ದಕ್ಷಿಣ ಕನ್ನಡ | 6230 | 2804 | 380 | 1065520 |
| 29 | ಶಿವಮೊಗ್ಗ | 8415 | 3787 | 380 | 1439060 |
| 30 | ತುಮಕೂರು | 9481 | 4266 | 380 | 1621080 |
| 31 | ಕೊಡಗು | 1365 | 614 | 380 | 233320 |
| | | 130919 | 59210 | | 22499800 |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ